# ನಾರಾಯಣನನ್ನು ಹೆದರಿಸಿದ ಆಗಂತುಕ

ಫಾರ್ಮ್ ಹೌಸ್.... ಸಾಯಂಕಾಲದ ಸಮಯ. ಮನೆಯ ಹೊರಗೆ ಸದ್ದಾಗಿ ಮನೆಯ ಒಳಗಿಂದ ಓಡಿ ಬಂದ ನಾರಾಯಣ ಸುತ್ತಲೂ ನೋಡಿದ. ಗಿಡಗಳಲ್ಲಿ ಅಡಗಿ ಕುಳಿತ ಯಾರೋ ಹಂತಕರು ಓಡಿ ಹೋದಂತಾಗಿ ಅನುಮಾನ ಬಂದು ಇನ್ನೇನು ಕಿರುಚಾಡಬೇಕು? ಅಷ್ಟರಲ್ಲಿ ಯಾರೋ ಹಿಂದಿನಿಂದ ಬಂದು ನಾರಾಯಣನ ಬಾಯಿಯನ್ನು ಗಟ್ಟಿಯಾಗಿ ಮುಚ್ಚಿ ಹಿಡಿದುಕೊಂಡು 'ಮಗನೇ ಬಾಯಿ ತೆಗೆದರೆ ಅವರಿಗಾದ ಗತಿಯೇ ನಿನಗೂ ಆಗುತ್ತದೆ' ಎಂದರು. ನಾರಾಯಣ ಭಯದಿಂದ ಬಾಯಿ ಮುಚ್ಚಿಕೊಂಡು ಹಾಗೇ ಕಣ್ಣುಗಳನ್ನು ಬಿಡುತ್ತಾ ಅವರನ್ನು ನೋಡುತ್ತ ಇದ್ದುಬಿಟ್ಟ. ಮತ್ತೆ, ಆ ಹಂತಕರು 'ನೋಡು ನಾರಾಯಣ, ಈಗ ಅವರು ಕೊಲೆಯಾಗಿಲ್ಲ. ಹೃದಯಾಘಾತ ಆಗಿದ್ದಾರೆ. ನೀನು ಏನಾದರು ಬಾಯಿ ಬಿಟ್ಟರೆ ನಿನ್ನ ಮಕ್ಕಳು, ಪತ್ನಿ, ನಿನಗೂ ಇದೇ ಗತಿಯಾಗುತ್ತದೆ ಹುಷಾರ್' ಎಂದು ಎಚ್ಚರಿಕೆ ಕೊಟ್ಟು ಗೋಡೆ ಹಾರಿ ಕತ್ತಲಲ್ಲಿ ಬೆಟ್ಟದ ಕಡೆಗೆ ಓಡಿಹೋದರು.

**ಕಾಲ ಪ್ರಸ್ತುತ ಅಥವಾ 2018**

ಪ್ರಾಣವಾಯು ಕಳೆದುಕೊಂಡ ನನ್ನ ಆತ್ಮ ಈಗ ಸ್ವಲ್ಪ ದೂರದಲ್ಲಿರುವ ಫಾರ್ಮ್‌ಹೌಸ್ ಗೋಡೆಯ ಮೇಲೆ ಕುಳಿತುಕೊಂಡು ಶರೀರದ ಕಡೆಗೆಯೇ ನೋಡುತ್ತಿತ್ತು. ಪ್ರಾಣ ಕಳೆದುಕೊಳ್ಳುವ ಮುಂಚೆ ತುಂಬ ತೊಂದರೆ ಪಟ್ಟ ನಾನು ಉಸಿರಾಡಲಾಗದೆ, ನರಳಾಡಿದ ಮೇಲೆ ದೇಹ ತನಗೆ ತಾನೇ ಸ್ತಬ್ಧವಾಗಿ ಚಲನೆ ಇಲ್ಲದೆ ನಿಂತುಹೋಗಿತ್ತು. ಫಾರ್ಮ್‌ಹೌಸ್‌ನಲ್ಲಿ ಕೆಲಸ ಮಾಡುವ ನಾರಾಯಣ ಊರಿಗೆ ಹೋಗಿದ್ದವನು ಗೇಟ್ ತೆಗೆದುಕೊಂಡು ನೇರವಾಗಿ ನಾನಿದ್ದ ಫಾರ್ಮ್‌ಹೌಸ್‌ನ ಮನೆಯೊಳಕ್ಕೆ ಬಂದು ಮಾತನಾಡಿಸಿ, ಕದಲಿಸಿ ನೋಡಿದ. ಏನೂ ಪ್ರಯೋಜನವಾಗಲಿಲ್ಲ. ನನ್ನ ಮೂಗಿನ ಹತ್ತಿರ ಬೆರಳುಗಳನ್ನು ಇಟ್ಟು ನೋಡಿದ. ಈಗ ನಾರಾಯಣನ ಪತ್ನಿ ಲಕ್ಷ್ಮೀ ಫಾರ್ಮ್ ಹೌಸ್ ಒಳಕ್ಕೆ ಬಂದಿದ್ದಳು. ನಾರಾಯಣ ಮತ್ತು ಲಕ್ಷ್ಮೀ ನನ್ನ ದೇಹದ ಜೊತೆಗೆ ಏನೆಲ್ಲ ಕಸರತ್ತು ಮಾಡಿದರೂ ನನ್ನ ದೇಹದಿಂದ ಪ್ರಾಣವಾಯು ಯಾವಾಗಲೋ ಹಾರಿ ಹೋಗಿಬಿಟ್ಟಿತ್ತು.

ಇಬ್ಬರೂ ಫಾರ್ಮ್‌ಹೌಸ್ ಹೊರಕ್ಕೆ ಬಂದು ಒಂದೇ ಸಮನೇ ಕೂಗಾಡಿದರು. ಕೂಗಾಟ ಕೇಳಿದ ಕೆಲವರು ಓಡಿ ಬಂದು ಉದ್ದಕ್ಕೆ ಬಿದ್ದಿದ್ದ ನನ್ನ ದೇಹವನ್ನು ನೋಡಿ, 'ಏನಾಯಿತು?' ಎಂದು ಕೇಳಿದರು. ನಾರಾಯಣ 'ಏನಾಯಿತೊ ಗೊತ್ತಿಲ್ಲ. ನಾನು ಫಾರ್ಮ್‌ಹೌಸ್ ಒಳಗೆ ಬಂದು ನೋಡಿದಾಗ ಮುಖ ಮೇಲಕ್ಕೆ ಮಾಡಿಕೊಂಡು ಮಲಗಿದ್ದರು. ಕೈಯಿಂದ ಕದಲಿಸಿ ನೋಡಿದೆ. ಏಳಲಿಲ್ಲ. ಕೈಮುಟ್ಟಿ ನೋಡಿದೆ. ಮೂಗಿನ ಹತ್ತಿರ ಕೈಹಿಡಿದು ನೋಡಿದೆ. ಉಸಿರೇ ಇಲ್ಲ. ಏನಾಯಿತೊ ಏನೊ?' ಎಂದು ಗಾಬರಿಯಾಗಿ ಅಳುತ್ತಲೇ ಬಡಿಬಡಿಸುತ್ತಿದ್ದ. ಲಕ್ಷ್ಮೀ ಒಂದೇ ಸಮನೆ ಕಿರುಚಾಡುತ್ತಿದ್ದಳು.

